ಅ) ಮತ್ತು ಆ) ಮಾಹಿತಿ ತಂತ್ರಜ್ಞಾನ ಉದ್ಯಮಗಳನ್ನು 2ನೇ ಹಂತದ ನಗರಗಳಲ್ಲಿ ಅಭಿವೃದ್ಧಿಗೊಳಿಸಲು ಉದ್ಯೋಗಾಧರಿತ ಪ್ರೋತ್ಸಾಹಕವಾಗಿ ಜಮೀನು ಹಂಚಿಕೆ, ಪಿಎಫ್/ಇಎಸ್ಐ ಮರುಪಾವತಿ, ರಿಯಾಯತಿ ದರದಲ್ಲಿ ವಿದ್ಯುಚ್ಛಕ್ತಿ, ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿಯನ್ನು ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 10 ಪಿಆರ್ಎಂ 2013, ದಿ:16.01.2014ರಲ್ಲಿ ಐ4 ಪಾಲಿಸಿಯಲ್ಲಿ ಘೋಷಿಸಲಾಗಿದೆ.

ಇ) ಈ ತರಹದ ಪ್ರಸ್ತಾವನೆಯು ಈ ಇಲಾಖೆಯ ಮುಂದೆ ಇರುವುದಿಲ್ಲ.

ಬಸ್ ಮಾರ್ಗಗಳ ರಾಷ್ಟ್ರೀಕರಣದ ವಿವರಗಳು

1604(2014); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ರಾಜ್ಯದಲ್ಲಿರುವ ಬಸ್ ಮಾರ್ಗಗಳ ರಾಷ್ಟ್ರೀಕರಣದ ವಿವರಗಳು ಹಾಗೂ ಇನ್ನೂ ಎಷ್ಟು ಬಸ್ ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ; ಅವುಗಳನ್ನು ಯಾವಾಗ ರಾಷ್ಟ್ರೀಕರಣಗೊಳಿಸಲಾಗುವುದು;

ಆ) ರಾಜ್ಯದಲ್ಲಿ ಸಾರಿಗೆ ವ್ಯವಸ್ಥೆಗೊಳಿಸಿರುವ ನಗರಗಳು ಯಾವುವು; ಹಾಗೂ ಎಷ್ಟು ನಗರಗಳಿಂದ ಸಾರಿಗೆ ವ್ಯವಸ್ಥೆ ಅನುಕೂಲ ಮಾಡುವಂತೆ ಬೇಡಿಕೆಗಳು ಬಂದಿವೆ;

ಇ) ರಾಜ್ಯದ ನಗರ ಪ್ರದೇಶಗಳಲ್ಲಿ ಸಾರಿಗೆ ವ್ಯವಸ್ಥೆಗೊಳಿಸಲು ಕಳೆದ ಎರಡು ವರ್ಷಗಳಲ್ಲಿ ಮಾಡಿದ ಅನುದಾನ ವೆಚ್ಚ ಮತ್ತು ನೂತನವಾಗಿ ನಗರ ಸಾರಿಗೆ ವ್ಯವಸ್ಥೆಗಾಗಿ ಮೀಸಲಿಟ್ಟ ಅನುದಾನ ಎಷ್ಟು?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ)

ರಾಜ್ಯದಲ್ಲಿ ಒಟ್ಟು 20 ರಾಷ್ಟ್ರೀಕೃತ ಮಾರ್ಗಗಳ ಯೋಜನೆಗಳು ಜಾರಿಯಲ್ಲಿರುತ್ತವೆ. ಅವುಗಳ ವಿವರಗಳು ಕೆಳಕಂಡಂತೆ ಇವೆ. ಇವುಗಳಲ್ಲಿ ಕೆಳಕಂಡ ಜಿಲ್ಲೆಗಳಲ್ಲಿ ಮಾರ್ಗಗಳನ್ನು ಸಂಪೂರ್ಣವಾಗಿ ರಾಷ್ಟ್ರೀಕರಣ ಮಾಡಲಾಗಿದೆ.

ಕ್ರ ಸಂ.	ರಾಷ್ಟ್ರೀಕೃತ ಯೋಜನೆಯ ಹೆಸರು	ರಾಷ್ಟ್ರೀಕರಣಗೊಂಡ ಮಾರ್ಗಗಳು
1	ಹಾಸನ ಯೋಜನೆ ದಿನಾಂಕ 22-12-1959	ಹಾಸನ ಜಿಲ್ಲೆ ಹಾಗೂ ಭಾಗಶ. ನೆರೆಯ ಜಿಲ್ಲೆಗಳನ್ನು ಒಳಗೊಂಡಂತೆ 98 ಮಾರ್ಗಗಳು.
2	ಬಿಜಾಪುರ ಯೋಜನೆ ದಿನಾಂಕ 18-2-1960	ವಿಜಯಪುರ ಜಿಲ್ಲೆ ಹಾಗೂ ಭಾಗಶ: ಬೆಳಗಾವಿ. ಧಾರವಾಡ. ರಾಯಚೂರು ಮತ್ತು ಕಲಬುರಗಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ 173 ಮಾರ್ಗಗಳು.
3	ರಾಯಚೂರು ಯೋಜನೆ ದಿನಾಂಕ 3-11-1987	ರಾಯಚೂರು ಜಿಲ್ಲೆ ಹಾಗೂ ಇತರೆ ನೆರೆಯ ಜಿಲ್ಲೆಗಳನ್ನು ಒಳಗೊಂಡಂತೆ 174 ಮಾರ್ಗಗಳು.
4	ಕಲಬುರಗಿ ಯೋಜನೆ ದಿನಾಂಕ 18-2-1960	ಬೀದರ್, ಕಲಬುರಗಿ, ರಾಯಚೂರು ಜಿಲ್ಲೆಗಳು ಹಾಗೂ ಭಾಗಶ: ಬಳ್ಳಾರಿ ಮತ್ತು ವಿಜಯಪುರ ಜಿಲ್ಲೆಗಳಿಗೆ ಸಂಬಂಧಿಸಿದಂತೆ
5	ಕಲಬುರಗಿ -ಬೀದರ್ ಯೋಜನೆ ದಿನಾಂಕ 6-11-1985	ಕಲಬುರಗಿ, ಬೀದರ್ ಹಾಗೂ ಇತರೆ ನೆರೆಯ ಜಿಲ್ಲೆಗಳನ್ನು ಒಳಗೊಂಡಂತ 203 ಮಾರ್ಗಗಳು.
6	ಹುಬ್ಬಳ್ಳಿ ಧಾರವಾಡ ಯೋಜನೆ ದಿನಾಂಕ 11-7-1959	ಧಾರವಾಡ, ಉತ್ತರ ಕನ್ನಡ ಜಿಲ್ಲೆಗಳು ಭಾಗಶ: ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳಿಗೆ ಸಂಬಂಧಿಸಿದಂತೆ 170 ಮಾರ್ಗಗಳು.
~~7~~	~~ಬೆಂಗಳೂರು-ಯೋಜನೆ~~	~~ಕೋಲಾರ/ ತುಮಕೂರು/ಮೈಸೂರು~~
	ದಿನಾಂಕ: 7-6-1960	ಚಿತ್ರದುರ್ಗ/ಹಾಸನ/ಕೊಡಗು/ದಕ್ಷಿಣ ಕನ್ನಡ / ಬಳ್ಳಾರಿ & ಚಿಕ್ಕಮಗಳೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆ 94 ಮಾರ್ಗಗಳು.
8	ಬೆಳಗಾವಿ ಯೋಜನೆ ದಿನಾಂಕ 19-1-1960	ಬೆಳಗಾವಿ ಜಿಲ್ಲೆ ಹಾಗೂ ಭಾಗಶ: ಉತ್ತರ ಕನ್ನಡ, ಧಾರವಾಡ ಮತ್ತು ವಿಜಯಪುರ ಜಿಲ್ಲೆಗಳಿಗೆ ಸಂಬಂಧಿಸಿದಂತೆ 175 ಮಾರ್ಗಗಳು.
9	ಹುಬ್ಬಳ್ಳಿ ನಗರ ಯೋಜನೆ ದಿನಾಂಕ 7-11-1960	ಹುಬ್ಬಳ್ಳಿ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ 8 ಮೈಲಿ ನಗರ ಮಿತಿಯ ಸರಹದ್ದಿಗೆ ಸಂಬಂಧಿಸಿದಂತೆ.

10	ಕಲಬುರಗಿ ಸೇಡಂ ಯೋಜನೆ ದಿನಾಂಕ 30-4-1964	ಕಲಬುರಗಿಯಿಂದ ಜಗತ್ ಮಾರ್ಗವಾಗಿ ಸೇಡಂ, ಕ್ಯಾಲನೂರು ಕ್ರಾಸ್ ಮಾರ್ಗವಾಗಿ ಸಂಚರಿಸುವ ಒಳಗೊಂಡಂತೆ ಒಂದು ಮಾರ್ಗ.
11	ಯಾದಗಿರಿ ನಾರಾಯಣಪುರ ಪಟ್ಟಣ ಯೋಜನೆ ದಿನಾಂಕ 2-7-1964	ಯಾದಗಿರಿಯಿಂದ [illegible] ಮಾರ್ಗವಾಗಿ ನಾರಾಯಣಪುರಕ್ಕೆ ಸಂಬಂಧಿಸಿದ ಒಂದು ಮಾರ್ಗ.
	ಭಾಗಶಃ ರಾಷ್ಟ್ರೀಕರಣಗೊಂಡ ಜಿಲ್ಲೆಗಳ ಮಾರ್ಗಗಳು	
1	ಕನಕಪುರ ಯೋಜನೆ ದಿನಾಂಕ. 1-12-1966	ಬೆಂಗಳೂರು, ಮಂಡ್ಯ, ಚಾಮರಾಜನಗರ, ರಾಮನಗರ & ಮೈಸೂರು ಜಿಲ್ಲೆಗಳನ್ನು ಒಳಗೊಂಡಂತೆ 29 ಮಾರ್ಗಗಳು.
2	ಆನೇಕಲ್ ಯೋಜನೆ ದಿನಾಂಕ 1-5-1959	ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಆನೇಕಲ್ ಮತ್ತು ಹೊಸಕೋಟೆ ತಾಲ್ಲೂಕುಗಳನ್ನು ಒಳಗೊಂಡಂತೆ 14 ಮಾರ್ಗಗಳು.
3	ಮೈಸೂರು ಯೋಜನೆ ದಿನಾಂಕ 17-11-1960	ಮೈಸೂರು, ಉಡುಪಿ, ಮಂಗಳೂರು, ಮಡಿಕೇರಿ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಒಳಗೊಂಡಂತೆ 64 ಮಾರ್ಗಗಳು.
4	ಶಿವಮೊಗ್ಗ ಯೋಜನೆ ದಿನಾಂಕ 1-7-1968	ಶಿವಮೊಗ್ಗ ಜಿಲ್ಲೆ ಹಾಗೂ ಇತರೆ ನೆರೆಯ ಜಿಲ್ಲೆಗಳನ್ನು ಒಳಗೊಂಡಂತೆ 48 ಮಾರ್ಗಗಳು.
5	ಮಂಗಳೂರು ಯೋಜನೆ ದಿನಾಂಕ 18-3-1967	ಮಂಗಳೂರು ಮತ್ತು ಇತರೆ ನೆರೆಯ ಜಿಲ್ಲೆಗಳನ್ನು ಒಳಗೊಂಡಂತೆ 31 ಮಾರ್ಗಗಳು.
6	ಬಳ್ಳಾರಿ ಯೋಜನೆ ದಿನಾಂಕ 18-4-1964	ಬಳ್ಳಾರಿ ಜಿಲ್ಲೆ ಹಾಗೂ ಇತರೆ ನೆರೆಯ ಜಿಲ್ಲೆಗಳನ್ನು ಒಳಗೊಂಡಂತೆ 48 ಮಾರ್ಗಗಳು.
7	ಚಿತ್ರದುರ್ಗ -ದಾವಣಗೆರೆ ಯೋಜನೆ ದಿನಾಂಕ 23-9-1987	ಚಿತ್ರದುರ್ಗದಿಂದ ಗುತ್ತಿನಾಡು, ಕತ್ರಾಳು, ಸಿರಿಗೆರೆ ಕ್ರಾಸ್, ಬರ್ಮಸಾಗರ (ಎನ್.ಹೆಚ್.4) ಮಾರ್ಗವಾಗಿ ದಾವಣಗೆರೆಗೆ ಒಂದು ಮಾರ್ಗ.
8	ಬೆಂಗಳೂರು ಯೋಜನೆ ದಿನಾಂಕ: 7-6-1960	ಕೋಲಾರ/ ತುಮಕೂರು/ಮೈಸೂರು / ಚಿತ್ರದುರ್ಗ/ ಹಾಸನ / ಕೊಡಗು / ದಕ್ಷಿಣ ಕನ್ನಡ / ಬಳ್ಳಾರಿ & ಚಿಕ್ಕಮಗಳೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆ 94 ಮಾರ್ಗಗಳು.
9	ಕೋಲಾರ ಸಾರಿಗೆ ಯೋಜನೆ ದಿನಾಂಕ: 25-1-1968	ಕೋಲಾರ/ ಬೆಂಗಳೂರು/ ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ಒಳಗೊಂಡಂತೆ 87 ಮಾರ್ಗಗಳು.

ಭಾಗಶಃ: ರಾಷ್ಟ್ರೀಕರಣಗೊಂಡ ಜಿಲ್ಲೆಗಳಲ್ಲಿ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಗೊಳಿಸುವ ವಿಷಯವು ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ಆ) ರಾಜ್ಯದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಬೆಂಗಳೂರು ನಗರದ ಪಾಲಿಕೆಯ ವ್ಯಾಪ್ತಿಯೂ ಸೇರಿದಂತೆ ನಗರದಾದ್ಯಂತ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ.

ಮಂಗಳೂರು, ಉಡುಪಿ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಮತ್ತು ಚಿಕ್ಕಮಗಳೂರು ನಗರಗಳಲ್ಲಿ ಖಾಸಗಿಯವರಿಗೆ ನಗರ ಸಾರಿಗೆ ಸೌಲಭ್ಯ ಒದಗಿಸಲು ರಹದಾರಿಗಳನ್ನು ನೀಡಲಾಗಿರುತ್ತದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಸಾರ್ವಜನಿಕ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯ ನೀಡುವ ನಿಟ್ಟಿನಲ್ಲಿ ಪ್ರಸ್ತುತ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಮಂಡ್ಯ, ಹಾಸನ ಚಿಕ್ಕಮಗಳೂರು, ಮಂಗಳೂರು, ದಾವಣಗೆರೆ ಮತ್ತು ಚಿತ್ರದುರ್ಗ ನಗರಗಳಿಗೆ ನಗರ ಸಾರಿಗೆ ಸೌಲಭ್ಯ ಕಲ್ಪಿಸಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.

ಮುಂದುವರೆದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯಲ್ಲಿ ರಾಮನಗರ, ಕೆ.ಜಿ.ಎಫ್, ಉಡುಪಿ, ದಾವಣಗೆರೆ, ಶಿವಮೊಗ್ಗ, ಭದ್ರಾವತಿ, ಸಾಗರ, ತಿಪಟೂರು, ದೊಡ್ಡಬಳ್ಳಾಪುರ, ಚಿಂತಾಮಣಿ, ಚನ್ನರಾಯಪಟ್ಟಣ, ಸಕಲೇಶಪುರ, ಮಡಿಕೇರಿ, ಪುತ್ತೂರು, ಸುಳ್ಯ, ನಗರ/ಪಟ್ಟಣಗಳಲ್ಲಿ ನಗರ ಸಾರಿಗೆ ಸೌಲಭ್ಯ ಒದಗಿಸುವಂತೆ ಸಾರ್ವಜನಿಕ ಪ್ರಯಾಣಿಕರಿಂದ ಬೇಡಿಕೆ ಬಂದಿರುತ್ತದೆ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ:

ಅ) ವಾ.ಕ.ರ.ಸಾ ನಿಗಮದ ವತಿಯಿಂದ ಪ್ರಸ್ತುತ ಹುಬ್ಬಳ್ಳಿ, ಧಾರವಾಡ, ಕುಮಟಾ, ಕಾರವಾರ, ಬಾಗಲಕೋಟೆ, ಗದಗ ಹಾಗೂ ಬೆಳಗಾವಿ ನಗರಗಳಲ್ಲಿ ನಗರ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ.

ಆ) ಹಾವೇರಿ, ನಿಪ್ಪಾಣಿ, ರಾಣಿಬೆನ್ನೂರು, ಜಮಖಂಡಿ ಹಾಗೂ ಇಳಕಲ್ ಪಟ್ಟಣಗಳಲ್ಲಿ ನಗರ ಸಾರಿಗೆ ಪ್ರಾರಂಭಿಸಲು ಬೇಡಿಕೆಗಳು ಬಂದಿರುತ್ತವೆ.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ;

ಈ.ಕ.ರ.ಸಾ.ನಿಗಮದ ವತಿಯಿಂದ 8 ನಗರ/ಪಟ್ಟಣಗಳಲ್ಲಿ ನಗರ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ವಿವರಗಳು ಈ ಕೆಳಗಿನಂತಿರುತ್ತವೆ.

ಕ್ರ.ಸಂ.	ನಗರ/ಪಟ್ಟಣ	ಕಾರ್ಯಾಚರಣೆಯಲ್ಲಿರುವ ನಗರ ಸಾರಿಗೆ ವಾಹನಗಳ ಸಂಖ್ಯೆ
1	ಕಲಬುರಗಿ	78
2	ಬೀದರ	16
3	ಯಾದಗಿರಿ	13
4	ರಾಯಚೂರು	20
5	ಕೊಪ್ಪಳ	12
6	ಬಳ್ಳಾರಿ	33
7	ವಿಜಯಪುರ	54
8	ಹೊಸಪೇಟೆ	18
	ಒಟ್ಟು	**244**

ಮೇಲ್ಕಂಡ ನಿಗಮದ ವತಿಯಿಂದ ಯಾವುದೇ ನಗರಗಳಿಗೆ ನಗರ ಸಾರಿಗೆ ವ್ಯವಸ್ಥೆ ಕಲ್ಪಿಸಲು ಅನುಕೂಲ ಮಾಡಿಕೊಡುವಂತೆ ಬೇಡಿಕೆಗಳು ಬಂದಿರುವುದಿಲ್ಲ. ಆದರೆ ಮೇಲಿನ ನಗರಗಳನ್ನೊಳಗೊಂಡಂತೆ

ಗಂಗಾವತಿ ಮತ್ತು ಸಿಂಧನೂರು ಪಟ್ಟಣಗಳಲ್ಲಿ ಜೆ–ನರ್ಮ್ ಅಡಿ ನಗರ ಸಾರಿಗೆಗಳನ್ನು ಪ್ರಾರಂಭಿಸಲು ಯೋಜಿಸಲಾಗಿರುತ್ತದೆ.

ಇ) **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:**

ರಾಜ್ಯದ ನಗರ ಪ್ರದೇಶಗಳಲ್ಲಿ ಸಾರಿಗೆ ವ್ಯವಸ್ಥೆಗೊಳಿಸಲು ಕಳೆದ 2 ವರ್ಷಗಳಲ್ಲಿ ಯಾವುದೇ ವೆಚ್ಚ ಮಾಡಿರುವುದಿಲ್ಲ ಮತ್ತು ನೂತನವಾಗಿ ನಗರ ಸಾರಿಗೆ ವ್ಯವಸ್ಥೆಗಾಗಿ ಮೀಸಲಿಟ್ಟ ಅನುದಾನ ರೂ. 182.59 ಕೋಟಿ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ:

2013–14 ರಲ್ಲಿ DULT ಇಲಾಖೆಯು ಗದಗ ಬೆಟಗೇರಿ ನಗರ ಸಾರಿಗೆ ಬಸ್ ಖರೀದಿಗಾಗಿ ರೂ. 40.00 ಲಕ್ಷ ಹಾಗೂ 2014–15 ರಲ್ಲಿ ರೂ. 10.00 ಲಕ್ಷಗಳನ್ನು ಮತ್ತು 2014–15ನೇ ಸಾಲಿನಲ್ಲಿ ರೂ. 3.40 ಕೋಟಿಗಳನ್ನು ಬಿಡುಗಡೆ ಮಾಡಿರುತ್ತದೆ ಹಾಗೂ ಕೇಂದ್ರ ಸರ್ಕಾರದ ಜೆ.ಎನ್. ನರ್ಮ್ ಯೋಜನೆಯಡಿಯಲ್ಲಿ ವಾಹನ ಖರೀದಿಗಾಗಿ ರೂ. 28.14 ಕೋಟಿಗಳು ಬಿಡುಗಡೆಯಾಗಿರುತ್ತದೆ.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ:

ಈ.ಕ.ರ.ಸಾ.ನಿಗಮದ ವತಿಯಿಂದ ನಗರ ಪ್ರದೇಶಗಳಲ್ಲಿ 2013–14ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳು ಈ ಕೆಳಗಿನಂತಿವೆ.

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ವಿವರ	ವೆಚ್ಚ
1	ಕಲಬುರಗಿ ನಗರದಲ್ಲಿ ರೈಲು ನಿಲ್ದಾಣದ ಹತ್ತಿರ ಬಸ್ ನಿಲ್ದಾಣ ನಿರ್ಮಿಸುವುದು	70.00
2	ಕಲಬುರಗಿ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ನಗರ ಸಾರಿಗೆ ಬಸ್ ತಂಗುದಾಣವನ್ನು ನಿರ್ಮಿಸುವುದು	30.00
3	ಕಲಬುರಗಿ ನಗರದಲ್ಲಿ ನಗರ ಸಾರಿಗೆ ಬಸ್ ಘಟಕವನ್ನು ನಿರ್ಮಿಸುವುದು	338.00

ಉಚಿತ ವೈ ಫೈ ಕೇಂದ್ರಗಳ ಚಾಲನೆ

1606(2016); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಆಧುನಿಕ ತಂತ್ರಜ್ಞಾನದ ಬಳಕೆಯನ್ನು ಪ್ರಮುಖ ಶೈಕ್ಷಣಿಕ ವಲಯಕ್ಕೆ ನೀಡುವ ಮೂಲಕ ನೂತನ ತಂತ್ರಜ್ಞಾನದ ಸೌಲಭ್ಯಗಳನ್ನು ಅಭ್ಯಸಿಸಲು ಮತ್ತು ಉಪಯೋಗಿಸಿಕೊಳ್ಳಲು ನೆರವಾಗುವ ವೈಫೈ ಕೇಂದ್ರಗಳನ್ನು ಪ್ರಾರಂಭಿಸಿ ಅನುಕೂಲ ಮಾಡಿಕೊಡುವಲ್ಲಿ ಸರ್ಕಾರ ಜರುಗಿಸಿದ ಕ್ರಮಗಳೇನು;

ಆ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಸಮಾನ ಸಂಖ್ಯೆಯಲ್ಲಿ ವೈಫೈ ಕೇಂದ್ರಗಳಿಗೆ ಚಾಲನೆ ನೀಡಲಾಗುತ್ತದೆಯೇ; ಈ ಸೇವಾ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಮತ್ತು ಸೌಲಭ್ಯದ ಪೂರ್ಣ ಪ್ರಮಾಣದ ಉಪಯೋಗಗಳನ್ನು ಪಡೆದುಕೊಳ್ಳಲು ನಿಗದಿಪಡಿಸಿರುವ ಕ್ರಮನಿಯಮಗಳೇನು;